# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 551 |
| 2 | ಸದಸ್ಯರ ಹೆಸರು | : | ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 20-08-2026 |
| 4 | ಉತ್ತರಿಸುವವರು | : | ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಪ್ರಾಥಮಿಕ, ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜು, ಪದವಿ ಕಾಲೇಜುಗಳೆಷ್ಟು; (ವಿವರ ನೀಡುವುದು) | ಗ್ರೇಟರ್ ಬೆಂಗಳೂರು ಪ್ರಾಧಿಕಾರದಡಿಯ 04 ನಗರ ಪಾಲಿಕೆಯಲ್ಲಿ ನಡೆಯುತ್ತಿರುವ ಶಾಲಾ/ಕಾಲೇಜುಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ: (ಕೆಳಗಿನ ಕೋಷ್ಟಕ 1) |
| ಆ | ಸದರಿ ಶಾಲಾ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಾರ್ಯ ನಿರ್ವಹಿಸುತ್ತಿರುವ ಖಾಯಂ ಹಾಗೂ ಹೊರಗುತ್ತಿಗೆ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಬೋಧಕ/ ಬೋಧಕೇತರರೆಷ್ಟು; (ವಿವರ ನೀಡುವುದು) | (ಕೆಳಗಿನ ಕೋಷ್ಟಕ 2) |
| ಇ | ಸದರಿ ಶಾಲಾ ಕಾಲೇಜುಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರಿಗೆ ಯಾವ ಏಜೆನ್ಸಿ ಮೂಲಕ ಎಷ್ಟೆಷ್ಟು ವೇತನವನ್ನು ನೀಡಲಾಗುತ್ತಿದೆ; (ವಿವರ ನೀಡುವುದು); | ಪಾಲಿಕೆಯ ಶಾಲಾ/ಕಾಲೇಜುಗಳಲ್ಲಿ 2023-24ನೇ ಸಾಲಿನವರೆಗೆ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದ ಶಿಕ್ಷಕರು/ ಉಪನ್ಯಾಸಕರ ಹೊರಗುತ್ತಿಗೆ ಪದ್ಧತಿಯನ್ನು 2024-25ನೇ ಸಾಲಿನಲ್ಲಿ ರದ್ದುಪಡಿಸಲಾಗಿದೆ. ಸದರಿ ಶಿಕ್ಷಕರು/ ಉಪನ್ಯಾಸಕರುಗಳನ್ನು 2024-25ನೇ ಸಾಲಿಗೆ ಕರ್ನಾಟಕ ಸರ್ಕಾರದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ನಿಯಮಾವಳಿಗಳಂತೆ ಎಸ್.ಡಿ.ಎಂ.ಸಿ ಹಾಗೂ ಸಿ.ಡಿ.ಸಿ ರಚಿಸಿ ಇದರ ಮುಖಾಂತರ ಅತಿಥಿ ಶಿಕ್ಷಕರು/ ಉಪನ್ಯಾಸಕರು ಗಳನ್ನಾಗಿ ನಿಯೋಜಿಸಿಕೊಳ್ಳಲಾಗಿರುತ್ತದೆ. |

ಕೋಷ್ಟಕ 1 (ಅ):

| ಕ್ರ.ಸಂ | ಶಾಲಾ/ಕಾಲೇಜುಗಳ ವಿವರಗಳು | ಇರುವ ಸಂಖ್ಯೆಗಳು |
|---|---|---|
| 1 | ಪ್ರಾಥಮಿಕ ಶಾಲೆಗಳು | 18 |
| 2 | ಪ್ರೌಢಶಾಲೆಗಳು | 36 |
| 3 | ಪದವಿ ಪೂರ್ವ ಕಾಲೇಜುಗಳು | 21 |
| 4 | ಪದವಿ ಕಾಲೇಜುಗಳು | 04 |
| | **ಒಟ್ಟು** | **80** |

ಕೋಷ್ಟಕ 2 (ಆ):

| ಕ್ರ. ಸಂ | ವಿವರಗಳು | ಕಾರ್ಯ ನಿರ್ವಹಿಸುತ್ತಿರುವ ಖಾಯಂ ಬೋಧಕರ ಸಂಖ್ಯೆ | ಕಾರ್ಯ ನಿರ್ವಹಿಸುತ್ತಿರುವ ಖಾಯಂ ಬೋಧಕೇತರ ಸಂಖ್ಯೆ | ಹೊರಗುತ್ತಿಗೆ/ ಅತಿಥಿ ಶಿಕ್ಷಕರು/ ಉಪನ್ಯಾಸಕರ ಸಂಖ್ಯೆ |
|---|---|---|---|---|
| 1 | ಪ್ರಾಥಮಿಕ ಶಾಲೆಗಳು | 26 | 5 | 113 |
| 2 | ಪ್ರೌಢಶಾಲೆಗಳು | 31 | 40 | 336 |
| 3 | ಪದವಿ ಪೂರ್ವ ಕಾಲೇಜುಗಳು | 45 | 23 | 226 |
| 4 | ಪದವಿ ಕಾಲೇಜುಗಳು | - | - | 53 |
| | **ಒಟ್ಟು** | **102** | **68** | **728** |

<table>
<tr><td></td><td></td><td>ಕರ್ನಾಟಕ ಸರ್ಕಾರದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಎಸ್.ಡಿ.ಎಂ.ಸಿ ಹಾಗೂ ಸಿ.ಡಿ.ಸಿ ನಿರ್ದೇಶನಗಳಂತೆ ಅತಿಥಿ ಶಿಕ್ಷಕರು/ಉಪನ್ಯಾಸಕರುಗಳನ್ನು ಆಯ್ಕೆಮಾಡಿಕೊಳ್ಳಲು ಪ್ರತಿ ಶೈಕ್ಷಣಿಕ ಸಾಲಿನಲ್ಲಿಯೂ ದಿನಪತ್ರಿಕೆಗಳಲ್ಲಿ ಪ್ರಕಟಿಸಿ ಅರ್ಜಿ ಆಹ್ವಾನಿಸಿ ಬಂದ ಅರ್ಜಿಗಳ ನಿಯಮಾನುಸಾರ ಎಸ್.ಡಿ.ಎಂ.ಸಿ ಹಾಗೂ ಸಿ.ಡಿ.ಸಿ ಸಂದರ್ಶನ ಮೂಲಕ ಪರಿಶೀಲಿಸಿ ಅರ್ಹ ಅಭ್ಯರ್ಥಿಗಳನ್ನು 11 ಮಾಹೆಗಳಿಗೆ ಮಾತ್ರ ಆಯ್ಕೆ ಮಾಡಿಕೊಳ್ಳಲಾಗುತ್ತದೆ. 2026-27ನೇ ಸಾಲಿನ ಗೌರವಧನದ ವಿವರ ಕೆಳಕಂಡಂತಿರುತ್ತದೆ.
<table>
<tr><th>ಕ್ರ. ಸಂ</th><th>ಶಾಲಾ/ಕಾಲೇಜಿನ ವಿವರ</th><th>ಪಾಲಿಕೆಯ ಗೌರವಧನ ನೀಡುತ್ತಿರುವ ವಿವರ</th></tr>
<tr><td>1</td><td>ಪ್ರಾಥಮಿಕ ಶಾಲಾ ಸಹ ಶಿಕ್ಷಕರು</td><td>19,366/-</td></tr>
<tr><td>2</td><td>ಪ್ರೌಢಶಾಲಾ ಸಹ ಶಿಕ್ಷಕರು</td><td>22,840/-</td></tr>
<tr><td>3</td><td>ಪದವಿ ಪೂರ್ವ ಕಾಲೇಜು</td><td>25,697/-</td></tr>
<tr><td>4</td><td>ಪದವಿ ಕಾಲೇಜುಗಳು</td><td>27,897/-</td></tr>
</table></td></tr>
<tr><td>ಈ</td><td>ಈ ಶಾಲಾ/ಕಾಲೇಜುಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯನಿರ್ವಹಿಸುತ್ತಿರುವ ಬೋಧಕರಿಗೆ ಎಷ್ಟು ವರ್ಷಗಳಿಗೊಮ್ಮೆ ವೇತನವನ್ನು ಪರಿಷ್ಕರಣೆ ಮಾಡಲಾಗುತ್ತಿದೆ, (ವಿವರ ನೀಡುವುದು)</td><td rowspan="2">2024-25ನೇ ಸಾಲಿನಿಂದ ಸಾರ್ವಜನಿಕ ಶಿಕ್ಷಣ ಇಲಾಖೆಯ ನಿಯಮಾವಳಿಗಳಂತೆ ಎಸ್.ಡಿ.ಎಂ.ಸಿ ಹಾಗೂ ಸಿ.ಡಿ.ಸಿ ರಚಿಸಿ ಇದರ ಮುಖಾಂತರ ಅತಿಥಿ ಶಿಕ್ಷಕರು/ ಉಪನ್ಯಾಸಕರುಗಳನ್ನಾಗಿ ನಿಯೋಜಿಸಿಕೊಳ್ಳಲಾಗಿರುತ್ತದೆ ಹಾಗೂ ಶಿಕ್ಷಣ ಇಲಾಖೆಯ ನಿರ್ದೇಶನದಂತೆ ಗೌರವಧನವನ್ನು ಪಾವತಿಸಲಾಗುತ್ತಿದೆ. ಶಿಕ್ಷಣ ಇಲಾಖೆಯು ವೇತನ ಪರಿಷ್ಕರಣೆ ಮಾಡಿ ಗೌರವಧನ ಹೆಚ್ಚಿಸಲು ಆದೇಶಿಸಿದಲ್ಲಿ ಪಾಲಿಕೆಯ ಶಾಲಾ/ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅತಿಥಿ ಶಿಕ್ಷಕರು/ ಉಪನ್ಯಾಸಕರುಗಳಿಗೂ ಸದರಿ ಆದೇಶದನ್ವಯ ಪರಿಷ್ಕರಿಸಿ ಗೌರವಧನ ಪಾವತಿಸಲಾಗುತ್ತದೆ. ಪ್ರಸ್ತುತ, ಪಾಲಿಕೆಯಿಂದ ನೀಡಲಾಗುತ್ತಿರುವ ಗೌರವಧನದ ಮೊತ್ತ ಶಾಲಾ ಶಿಕ್ಷಣ ಇಲಾಖೆ ಗೌರವಧನದ ಮೊತ್ತಕ್ಕಿಂತ ಹೆಚ್ಚಿದ್ದು, ವಿವರಗಳು ಈ ಕೆಳಕಂಡಂತಿರುತ್ತದೆ:
<table>
<tr><th>ಕ್ರ. ಸಂ</th><th>ಶಾಲಾ/ ಕಾಲೇಜಿನ ವಿವರ</th><th>ಶಾಲಾ ಶಿಕ್ಷಣ ಇಲಾಖೆ ಗೌರವಧನ ನೀಡುತ್ತಿರುವ ವಿವರ</th><th>ಪಾಲಿಕೆಯ ಗೌರವಧನ ನೀಡುತ್ತಿರುವ ವಿವರ</th></tr>
<tr><td>1</td><td>ಪ್ರಾಥಮಿಕ ಶಾಲಾ ಸಹ ಶಿಕ್ಷಕರು</td><td>10,000/-</td><td>19,366/-</td></tr>
<tr><td>2</td><td>ಪ್ರೌಢಶಾಲಾ ಸಹ ಶಿಕ್ಷಕರು</td><td>10,500/-</td><td>22,840/-</td></tr>
<tr><td>3</td><td>ಪದವಿ ಪೂರ್ವ ಕಾಲೇಜು</td><td>12,000/-</td><td>25,697/-</td></tr>
<tr><td>4</td><td>ಪದವಿ ಕಾಲೇಜು</td><td>30,000/-</td><td>30897/-</td></tr>
</table></td></tr>
<tr><td>ಉ</td><td>ಸದರಿ ಶಾಲಾ/ಕಾಲೇಜುಗಳಲ್ಲಿ ಸಿಬ್ಬಂದಿಗಳಿಗೆ ಕಳೆದ 08 ತಿಂಗಳಿನಿಂದ ವೇತನ ಪರಿಷ್ಕರಣೆ ಮಾಡಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದರೆ, ಯಾವ್ಯಾವ ವೇತನ ಪರಿಷ್ಕರಣೆ ಮಾಡಲಾಗುವುದು (ವಿವರ ನೀಡುವುದು.)</td></tr>
</table>

**ನಅಇ 315 ಎಂಎನ್‌ಯು 2026 (ಇ)**

**(ಕೃಷ್ಣ ಬೈರೇಗೌಡ)**
ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು